3ನೇ ಬಾರಿ ಪ್ರಧಾನಿಯಾಗಿ ನೆಹರೂ ದಾಖಲೆ
'ಸಮ'ನಾಗಿಸಿದ ನರೇಂದ್ರ ಮೋದಿ!







ಯಾರೋ ಸೀರಿಯಲ್ ನಟರು ಅನ್ನುತ್ತೆ ಸರ್.
ದಿನಕ್ಕೆ ಒಂದೇ ಹೊಡೆತ ಹೊಡೆಯೋದು
ಅಂತಾರೆ.

**ಗುಂಡ:** ಬದುಕು ಸಾಗ್ಲೋಕೆ ಪ್ರಿಂಟಿಂಗ್ ಪ್ರೆಸ್ ಇಟ್ಟಿದ್ದು, ಅಪರಾಧನಾ ಸ್ವಾಮಿ, ನೀವೇ ಹೇಳಿ?
**ಜಡ್ಜ್:** ಇಲ್ಲಪ್ಪಾ. ಯಾರು ಹೇಳಿದ್ದು ಹಾಗಂತ? ನಾನು ಹೇಳ್ತಾ ಇದ್ದೇನೆ ಅದು ಅಪರಾಧವಲ್ಲ. ಒಬ್ಬೊಬ್ಬರು ಒಂದೊಂದು ರೀತಿ ಜೀವನ ಸಾಗಿಸ್ತಾರೆ. ಅದ್ರಲ್ಲೇನ್ ತಪ್ಪಿದೆ. ಅದ್ ಸರಿ ಏನ್ ಪ್ರಿಂಟ್ ಮಾಡ್ತಿದ್ದೆ?
**ಗುಂಡ:** ನೋಟು ಮಹಾಸ್ವಾಮಿ.

**ಗಂಡ:** ಏನೇ ನಿಂತ್ ಊಟ ಮಾಡ್ತಿದ್ದಿಯಾ?
**ಹೆಂಡತಿ:** ಮೊನ್ನೆ ನೀವು ಜಗಳ ಮಾಡಿದಾಗ ಏನಂದ್ರಿ ಗೊತ್ತಾ?
**ಗಂಡ:** ಏನು?
**ಹೆಂಡತಿ:** ನಾನ್ ದುಡ್ದು ತಂದ್ ಹಾಕ್ತೀನಿ, ನೀನ್ ಕೂತ್ ಉಣ್ತೀಯ ಅಂತಿದ್ರಿ ಅಲ್ವಾ, ಅದಕ್ಕೆ ನಾನಿವತ್ತು ನಿಂತ್ಕೊಂಡು ಉಣ್ತಿದ್ದೇನೆ.

**ಗಂಡ ಹೆಂಡತಿ ಹೋಟೆಲ್‌ನಲ್ಲಿ.**
**ಗಂಡ:** ಚಿನ್ನಾ ಏನ್ ತಿಂತೀಯಾ?
**ಹೆಂಡತಿ:** ನೀವ್ ಏನ್ ತಿಂತೀರಿ ಅದನ್ನೇ ತಿಂತೀನಿ.
**ಗಂಡ:** ವೇಟರ್ ಒಂದು ಮೆನು ಕಾರ್ಡ್ ತಗೊಂಡು ಬಾ.
**ಹೆಂಡತಿ:** ರೀ ಎರಡು ಹೇಳಿ ನಾನು ಅದನ್ನೇ ತಿಂತೀನಿ.

**ಅಜ್ಜಿ:** ಮಗು ಅಳುತ್ತಿದೆ. ಅದಕ್ಕೆ ಬೇಕಾದುದನ್ನು ಕೊಡಬಾರದೆ?
**ಗುಂಡ:** ಅದು ಕೇಳಿದ್ದನ್ನು ಕೊಟ್ಟಿದ್ದಕ್ಕೆ ಅಳುತ್ತಿರುವುದು.
**ಅಜ್ಜಿ:** ಅಂಥದ್ದೇನು ಕೊಟ್ಟೆ?
**ಗುಂಡ:** ಹಸಿಮೆಣಸಿನಕಾಯಿ

**ಅಪ್ಪ:** ಇಷ್ಟು ದೊಡ್ಡ ಮನೆಯಲ್ಲಿ ಒಬ್ಬನೇ ಇದ್ದೀಯಲ್ಲ ಮಗನೆ ಭೂತ, ಗೀತಾ ಬಂದ್ರೆ ಏನ್ ಮಾಡ್ತಿಯಾ?
**ಮಗ:** ಸಿಂಪಲ್ ಅಪ್ಪ. ಭೂತ ಬಂದ್ರೆ ಹೊರಗೆ ಅಟ್ಟುತ್ತೇನೆ, ಗೀತಾ ಬಂದ್ರೆ ಮಾತಾಡ್ತೀನಿ.

**ಗುಂಡ:** ನಮ್ಮ ತಾತ ಯುದ್ಧದಲ್ಲಿ 50 ಜನರ ಕಾಲು ಕತ್ತರಿಸಿ ಹಾಕಿದ್ದ.
**ಸುಬ್ಬ:** ತಲೆ ಯಾಕೆ ಕತ್ತರಿಸಲಿಲ್ಲ?
**ಗುಂಡ:** ಯಾರೋ ಮೊದಲೇ ಕತ್ತರಿಸಿದ್ದರು.

**ಹೆಂಡತಿ:** ಮಗಳಿಗೆ ಮದುವೆ ಮಾಡಬಾರದೆ?
**ಗಂಡ:** ಯೋಗ್ಯ ವರ ಸಿಗಬೇಕಲ್ವಾ?
**ಹೆಂಡತಿ:** ನಮ್ಮ ಅಪ್ಪಾನೂ, ಯೋಗ್ಯ ವರನೇ ಸಿಗಲಿ ಅಂತಾ ಕಾಯ್ಕೊಂಡು ಕೂತ್ಕೊಂಡಿದ್ರೆ ನನ್ನ ಮದುವೆ ಆಗ್ತಾ ಇತ್ತಾ?

**ಭಿಕ್ಷುಕ:** ಸರ್ ಸ್ವಲ್ಪ ಭಿಕ್ಷೆ ಹಾಕ್ತೀರಾ?
**ಗುಂಡ:** ನನ್ನ ಹತ್ತಿರ ಏನೂ ಇಲ್ಲಪ್ಪ.
**ಭಿಕ್ಷುಕ:** ಹಾಗಾದ್ರೆ ನೀವೂ ನನ್ನ ಜತೆ ಬನ್ನಿ.

**ಪತ್ನಿ:** ಬೆಳಿಗ್ಗೆ ಹೊರಗೆ ಹೋಗುವಾಗ ದೇವರಿಗೆ ನಮಸ್ಕಾರ ಮಾಡಿ ಹೋಗಿ. ಒಳ್ಳೆಯದಾಗುತ್ತೆ.
**ಪತಿ:** ಏನೂ ಒಳ್ಳೆಯದಾಗಲ್ಲ. ಮದುವೆ ದಿನ ಹತ್ತಾರು ದೇವರುಗಳಿಗೆ ಕೈ ಜೋಡಿಸಿ, ಅಡ್ಡ ಬಿದ್ದು ನಮಸ್ಕಾರ ಮಾಡಿದ್ದೆ. ಏನಾದ್ರೂ ಒಳ್ಳೆದಾಯ್ತಾ, ಇಲ್ಲ ತಾನೇ?

ಊಟ ಮಾಡುತ್ತಿದ್ದ ಗಂಡ ಜೋರಾಗಿ ಹೆಂಡತಿಯನ್ನು ಕೂಗಿ ಹೇಳಿದ.
**ಗಂಡ:** ಏನೇ... ನೀನ್ ಇವಾಗ ತಾನೆ ಬಡಿಸಿ ಹೋದೆಯಲ್ಲ, ಈ ಪಲ್ಯದ ಹೆಸರೇನು?
**ಹೆಂಡ್ತಿ:** (ಅಡುಗೆ ಮನೆಯಿಂದ) ಯಾಕ್ರಿ, ಏನಾಯ್ತು?
**ಗಂಡ:** ಏನಿಲ್ಲ. ಏನ್ ತಿಂದ್ ಬಂದೆ ಸ್ವರ್ಗಕ್ಕೆ ಅಂತ ಕೇಳ್ತಾರಲ್ವ, ಆಗ ಹೇಳೋಕೆ ಬೇಕಾಗುತ್ತೆ ಅಂತ.

**ಡಾಕ್ಟರ್:** ಹೆಂಡ್ತಿ ಆರೋಗ್ಯ ಹೇಗಿದೆ?
**ಗುಂಡ:** ಪರ್ವಾಗಿಲ್ಲ ಡಾಕ್ಟ್ರೆ ಇವತ್ತು ಸ್ವಲ್ಪ ಜಗಳ ಮಾಡಿದ್ಲು.

ಸಂಗ್ರಹ: ಶರದ ಕುಲಕರ್ಣಿ, ಬೀದರ್